ಓ ಎಸ್ ನಂಃ 138-17
ಡಿ ಡಬ್ಲ್ಯೂ ಃ 1

ದಿಃ 25-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದ

30. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನಗೆ ಬಿ ಷೆಡ್ಯೂಲ್ ಆಸ್ತಿಯಲ್ಲಿ ಬೋರ್ ವೆಲ್ ಕೊರೆಸಲು ಮತ್ತು ಪಂಪ್ ಹೌಸ್ ನಿರ್ಮಿಸಲು ಹಕ್ಕು ಇದೆ ಎಂದು ಬರೆಯಲಾಗಿದೆ ಎಂದರೆ ನಿಜ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಈ ವಿಷಯವನ್ನು ನನ್ನ ಹೇಳಿಕೆಯ ಮೇರೆಗೆ ಬರೆಯಲಾಗಿದೆ ಎಂದರೆ ನಿಜ. ಸಾಕ್ಷಿಗೆ ಈಗ 28 ಫೋಟೋಗಳನ್ನು ತೋರಿಸಲಾಗಿ ಆ ಫೋಟೋಗಳಲ್ಲಿರುವ ಜಮೀನಿನಲ್ಲಿಯೇ ತಾವು ಬೋರ್ ವೆಲ್ ಕೊರೆಸಿ ಪಂಪ್ ಹೌಸ್ ನಿರ್ಮಿಸಿರುವುದಾಗಿ ಒಪ್ಪಿಕೊಂಡಿದ್ದರಿಂದ 28 ಫೋಟೋಗಳನ್ನು ಒಟ್ಟಾಗಿ ನಿಪಿ 34 ಎಂದು ಗುರುತಿಸಲಾಯಿತು. 20 ಗುಂಟೆ ಜಮೀನಿನಲ್ಲಿ ನಾವುಗಳು ದಿನಾಂಕಃ 19-06-2017 ರಿಂದ ಪಂಪ್ ಹೌಸ್ ನ್ನು ಕಟ್ಟಲು ಶುರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ವಿರುದ್ದ ವಾದಿಗಳು ದಿನಾಂಕಃ 20-06-2017 ರಂದು ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡಿದ್ದರು ಎಂದರೆ ಸರಿಯಲ್ಲ. ಬಿ ಷೆಡ್ಯೂಲ್ ಆಸ್ತಿಯಲ್ಲಿ ನನಗೆ ಬೋರ್ ವೆಲ್ ಕೊರೆಸಲು ಹಾಗೂ ಪಂಪ್ ಹೌಸ್ ಕಟ್ಟಲು ಹಕ್ಕು ಇದೆ ಎಂದು ತೋರಿಸಲು ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಹದ್ದುಬಸ್ತನ್ನು ಫಿಕ್ಸ್ ಮಾಡಲು ಬಂದಾಗ ನಾವುಗಳು ಸರ್ವೆಯರ್ ವಿರುದ್ದ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪೋಲಿಸರು ಯಾವ ದಿನಾಂಕ ದಾವಾ ಆಸ್ತಿಗೆ ಬಂದಿದ್ದರು ನೆನಪಿಲ್ಲ ಅವರು ದಾವಾ ಆಸ್ತಿ ಕಡೆ ಬಂದಿದ್ದರೋ ಇಲ್ಲವೋ ನೆನಪಿಲ್ಲ. ಪೋಲಿಸರು ಹೇಳಿದರೂ ಸಹ ನಾವು ಸರ್ವೆಯರ್ ವಿರುದ್ದ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು 4 ಎಕರೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ 5 ಎಕರೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತೇನೆ ಎಂದು ಹೇಳುತ್ತಾರೆ. ಎ ಷೆಡ್ಯೂಲ್ ಆಸ್ತಿಯ ಉತ್ತರಕ್ಕೆ ನನಗೆ ಸಂಬಂದಿಸಿದ 4 ಎಕರೆ ಜಮೀನು ಇದೆ ಎಂದರೆ ನಿಜ. ಆದರೆ ನಾನು 4 ಎಕರೆ ಜಮೀನಿನ ಸ್ವಾಧೀನತೆ ಹೊಂದಿಲ್ಲ ಬದಲಾಗಿ 5 ಎಕರೆ 1 ಗುಂಟೆ ಜಮೀನಿನ ಸ್ವಾಧೀನತೆ ಹೊಂದಿರುತ್ತೇನೆ ಎಂದರೆ ಸರಿಯಲ್ಲ, ಬೇಕಾದರೆ ಅಳತೆ ಮಾಡಿಸಬಹುದು ಎಂದು ಹೇಳುತ್ತಾರೆ. ದಾವಾ ಆಸ್ತಿಗಳನ್ನು ಅಳತೆ ಮಾಡಿಸಲು ಈ ನ್ಯಾಯಾಲಯದಿಂದ ಕಮಿಷನರ್ ರವರನ್ನು ನೇಮಿಸಬಹುದು. ಸಾಕ್ಷಿ ಮುಂದುವರೆದು ಒಂದೇ ಸರ್ವೆ ನಂಬರಿನಲ್ಲಿ 37 ಎಕರೆ 2 ಗುಂಟೆ ಜಮೀನು ಇರುತ್ತದೆ ಅದನ್ನು ಸಹ ಅಳತೆ ಮಾಡಿಸಬಹುದು ಎಂದು ಹೇಳುತ್ತಾರೆ. ಈ ದಾವೆಯನ್ನು 4 ಎಕರೆ ಜಮೀನಿನ ಮೇಲೆ ಹೂಡಿರುತ್ತಾರೆ.

ನಾನು ಖರೀದಿ ಮಾಡಿದ ಇನ್ನೊಂದು ಆಸ್ತಿಗೆ ಸರ್ವೆಯಾಗಿ ಪೋಡಿಯಾಗಿರುತ್ತದೆಯೋ ಇಲ್ಲವೋ ಸರಿಯಾಗಿ ಗೊತ್ತಿಲ್ಲ. ನಾನು ಖರೀದಿ ಮಾಡಿದ ಇನ್ನೊಂದು ಜಮೀನಿನ ಸರ್ವೆ ನಂ 62/1 ಆಗಿರುತ್ತದೆ. ಆ ಜಮೀನು ಪೋಡಿಯಾಗಿ ಬೇರೆ ಸರ್ವೆ ನಂಬರ್ ಕೊಟ್ಟಿರುತ್ತಾರೋ ಇಲ್ಲವೋ ಗೊತ್ತಿಲ್ಲ. ಸಾಕ್ಷಿಗೆ ಈಗ 2 ಪಹಣಿಗಳನ್ನು ತೋರಿಸಲಾಗಿ ಆ ಪಹಣಿಗಳ ಸರ್ವೆ ನಂಬರುಗಳು ಸರ್ವೆ ನಂಬರ್ 62/1 ಪೋಡಿಯಾದ ನಂತರ ಕೊಟ್ಟಂತಹ ಸರ್ವೆನಂಬರುಗಳು ಎಂದು ಸಾಕ್ಷಿ ನೋಡಿ ಒಪ್ಪಿದ್ದರಿಂದ ನಿಪಿ 35 ಮತ್ತು 36 ಎಂದು ಗುರುತಿಸಲಾಯಿತು. ನಿಡಿ 36 ರಲ್ಲಿ ನಮೂದಿಸಿರುವ ಊರ್ಮಿಳಾದೇವಿ ಎಂದರೆ ನಾನೇ ಆಗಿರುತ್ತೇನೆ. ನಿಡಿ 35 ರಲ್ಲಿ ನಮೂದಿಸಿರುವ ಹರ್ಷ ಮತ್ತು ಅರ್ಜುನ್ ನನ್ನ ಮಕ್ಕಳಾಗಿರುತ್ತಾರೆ. ನಾನು ಖರೀದಿ ಮಾಡಿದ ಆಸ್ತಿಯಲ್ಲಿ ಸರ್ವೆ ನಂ 62/3 ನನ್ನ ಹೆಸರಿಗೆ ಪೋಡಿಯಾಗಿದ್ದು, ಸರ್ವೆ ನಂ 62/4 ನನ್ನ ಮಕ್ಕಳ ಹೆಸರಿಗೆ ಪೋಡಿಯಾಗಿರುತ್ತದೆ ಎಂದರೆ ನಿಜ. ಬಿ ಷೆಡ್ಯೂಲ್ ಆಸ್ತಿ ವಾದಿಗಳಿಗೆ ಸಂಬಂದಿಸಿದ್ದು ಆ ಜಮೀನನ್ನು ವಾದಿಗಳು ಬಿಟ್ಟುಕೊಡಬೇಕೆಂದು ಕೇಳಿದ್ದು ನಾನು ಬಿಟ್ಟುಕೊಡದೇ ಇದ್ದಿದ್ದರಿಂದ ವಾದಿಗಳು ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ 4 ಎಕರೆ ಜಮೀನಿದ್ದು ಅವರ ಜಾಗದಲ್ಲಿ ನಾನು ಇಲ್ಲ ಎಂದು ಹೇಳುತ್ತಾರೆ. ದಿನಾಂಕಃ 22-07-2014 ರಂದು ದಾವಾ ಆಸ್ತಿಗಳನ್ನು ಸರ್ವೆ ಮಾಡಿಸುವಾಗ ಎ ಷೆಡ್ಯೂಲ್ ಆಸ್ತಿಯ ಉತ್ತರದಿಕ್ಕಿಗಿರುವ ಬಿ ಷೆಡ್ಯೂಲ್ ಆಸ್ತಿಯನ್ನು ನಾವುಗಳು ಒತ್ತುವರಿ ಮಾಡಿಕೊಂಡಿದ್ದು ವಾದಿಗಳಿಗೆ ಗೊತ್ತಾಗಿರುತ್ತದೆ ಎಂದರೆ ನಿಜ, ಸಾಕ್ಷಿ ಮುಂದುವರೆದು ಎ ಷೆಡ್ಯೂಲ್ ಆಸ್ತಿ ಇರುವುದಿಲ್ಲ ನಾನು ಒತ್ತುವರಿ ಮಾಡಿಕೊಂಡಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ 62/1 ರಲ್ಲಿ ವಾದಿಗಳಿಗೆ ಆಸ್ತಿ ಇರುವುದಿಲ್ಲ.

31. ಕುಟುಂಬದ ವಿಭಾಗದಲ್ಲಿ ವಾದಿಗಳಿಗೆ ಆಸ್ತಿಯನ್ನು ಕೊಟ್ಟಿರುತ್ತಾರೋ ಇಲ್ಲವೋ ಗೊತ್ತಿಲ್ಲ. ನಾನು ಖರೀದಿ ಮಾಡಿದ ಆಸ್ತಿಯ ಮಾಲೀಕರು ನನ್ನ ದೊಡ್ಡಪ್ಪ ಮತ್ತು ದೊಡ್ಡಮ್ಮ ಆಗಿರುತ್ತಾರೆ. ನನ್ನ ದೊಡ್ಡಪ್ಪನಿಗೆ ವಾದಿ ಖಾಸಾ ಸಹೋದರನಾಗಿರುತ್ತಾರೆ. ನಾನು ಖರೀದಿ ಮಾಡಿದ ಆಸ್ತಿಯನ್ನು ನನ್ನ ಅಜ್ಜಿ ನನ್ನ ದೊಡ್ಡಮ್ಮನಿಗೆ ಬರೆದುಕೊಟ್ಟಿರುತ್ತಾರೆ. ಯಾವ ದಾಖಲೆಯನ್ನು ನನ್ನ ಅಜ್ಜಿ ನನ್ನ ದೊಡ್ಡಮ್ಮನಿಗೆ ಬರೆದುಕೊಟ್ಟಿರುತ್ತಾರೆ ಗೊತ್ತಿಲ್ಲ. ನನ್ನ ಅಜ್ಜಿ ನನ್ನದೊಡ್ಡಮ್ಮನಿಗೆ ಏನು ಒಕ್ಕಣೆ ಬರೆದುಕೊಟ್ಟಿರುತ್ತಾರೆ ಗೊತ್ತಿಲ್ಲ ನನಗೆ ನನ್ನ ತಂದೆ ಹೇಳುತ್ತಿದ್ದರು ಎಂದು ಹೇಳುತ್ತಾರೆ. ನಾನು ಕನ್ನಡದಲ್ಲಿ ಎಂ ಎ ಓದಿರುತ್ತೇನೆ. ನನ್ನ ದೊಡ್ಡಪ್ಪನ ಕುಟುಂಬದಲ್ಲಿ ಭಾಗ ಆಗಿರುತ್ತದೆಯೋ ಇಲ್ಲವೋ ಗೊತ್ತಿಲ್ಲ. ನನ್ನ ದೊಡ್ಡಮ್ಮ ಜಮೀನನ್ನು ಕ್ರಯಕ್ಕೆ ಕೊಡುವಾಗ ಜಮೀನಿನ ದಾಖಲೆಗಳನ್ನು ನಾನು ನೋಡಿಲ್ಲ ನನ್ನ ತಂದೆ ನೋಡಿದ್ದರು. ನನ್ನ ತಂದೆ ನನ್ನ ದೊಡ್ಡಮ್ಮನಿಗೆ ಭಾಗವನ್ನು ಕೊಟ್ಟ ಬಗ್ಗೆ ಆದ ದಾಖಲೆಗಳನ್ನು ನೋಡಿದ್ದರು. ವಿಭಾಗ ಪತ್ರವನ್ನು ನನ್ನ ತಂದೆ ನೋಡಿದ್ದು ಅದರಲ್ಲಿ ಯಾರು ಭಾಗದಾರರು ನನಗೆ ಗೊತ್ತಿಲ್ಲ. 2004 ರಲ್ಲಿ ಜಮೀನನ್ನು ನನ್ನ ದೊಡ್ಡಮ್ಮನಿಂದ ಖರೀದಿ ಮಾಡುವಾಗ ಜಮೀನಿನ

ದಾಖಲೆಗಳನ್ನು ನಾನು ನೋಡಿರಲಿಲ್ಲ. 2004 ರ ನಂತರ ಇಲ್ಲಿಯವರೆಗೂ ನಾನು ಖರೀದಿ ಮಾಡಿದ ಜಮೀನು ನನ್ನ ದೊಡ್ಡಮ್ಮನಿಗೆ ಹೇಗೆ ಬಂದಿರುತ್ತದೆ ನಾನು ನೋಡಿಲ್ಲ. ನನ್ನ ತಂದೆಯ ತಾಯಿ ನಾನು ಖರೀದಿ ಮಾಡಿದ ಸರ್ವೆ ನಂ 62/1 ರಲ್ಲಿ 5 ಎಕರೆ ಜಮೀನನ್ನು ನನ್ನ ದೊಡ್ಡಮ್ಮನಿಗೆ ಕೊಟ್ಟಿರುತ್ತಾರೆ. ನನ್ನ ಅಜ್ಜನ ಹೆಸರು ತಿಮ್ಮರಾಯಪ್ಪ ಆಗಿರುತ್ತದೆ. ನನ್ನ ಅಜ್ಜಿ ನಂಜಮ್ಮರವರ ಗಂಡ ಕೆ ಟಿ ತಿಮ್ಮರಾಯಪ್ಪರವರು ಆಗಿರುತ್ತಾರೆ. ಸರ್ವೆ ನಂ 62/1 ಕೆ ಟಿ ತಿಮ್ಮರಾಯಪ್ಪರವರ ಜಮೀನು ಆಗಿದ್ದು ಅವರು ತೀರಿಕೊಂಡ ನಂತರ ಅದು ನನ್ನ ಅಜ್ಜಿಯ ಹೆಸರಿಗೆ ಬಂದಿರುತ್ತದೆ. ಕೆ ಟಿ ತಿಮ್ಮರಾಯಪ್ಪ ರವರಿಗೆ ಸರ್ವೆ ನಂ 62/1 ರಲ್ಲಿ ಎಷ್ಟು ಜಮೀನು ಇತ್ತು ಗೊತ್ತಿಲ್ಲ. ನಾನು ಇನ್ನೊಂದು ಜಮೀನು ಸರ್ವೆ ನಂ 62/1 ರಲ್ಲಿ 6 ಎಕರೆ ಜಮೀನನ್ನು ನನ್ನ ಚಿಕ್ಕಪ್ಪ ಟಿ ವಿಶ್ವನಾಥ್ ರವರಿಂದ ಖರೀದಿ ಮಾಡಿದ್ದು ಆ ಜಮೀನನ್ನು ಸಹ ಟಿ ವಿಶ್ವನಾಥ್ ರವರಿಗೆ ನನ್ನ ಅಜ್ಜಿ ಕೊಟ್ಟಿರುತ್ತಾರೆ. ನಿಡಿ1 ರ ಜಮೀನಿನ ಪಶ್ಚಿಮ ದಿಕ್ಕಿಗೆ ತೋರಿಸಿರುವ ವಿಶ್ವನಾಥ್ ರವರ ಜಮೀನೇ ಪೋಡಿಯಾದ ಸರ್ವೆ ನಂಬರ್ 62/3 ಮತ್ತು 62/4 ಆಗಿರುತ್ತದೆ ಎಂದರೆ ನಿಜ. ನಾನು ಹಾಜರುಪಡಿಸಿದ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಡಿ2 ರಲ್ಲಿ ನಮೂದಿಸಿರುವ ವ್ಯಕ್ತಿ ನನ್ನ ಚಿಕ್ಕಪ್ಪ ಇದ್ದು ಅವರು ಈ ದಾವೆಯ ವಾದಿಯಾಗಿರುತ್ತಾರೆ. ನಿಡಿ 2 ರಲ್ಲಿ ವಾದಿಗೆ 5 ಎಕರೆ ಜಮೀನು ಎಂದು ತೋರಿಸಿರುತ್ತಾರೆ. ನಿಡಿ 2 ರಲ್ಲಿ ನಮೂದಿಸಿರುವ ವ್ಯಕ್ತಿಗಳ ಜಮೀನುಗಳು ಸರ್ವೆ ನಂಬರ್ 62/1 ರಲ್ಲಿ ಬರುತ್ತದೆ ಎಂದರೆ ನಿಜ. ನಿಡಿ 2 ರಲ್ಲಿ ವ್ಯಕ್ತಿಗಳಿಗೆ ಬೇರೆ ಬೇರೆ ಎಂ ಆರ್ ಗಳ ಮೂಲಕ ಖಾತೆ ಮಾಡಿರುತ್ತಾರೆ ಎಂದರೆ ಆ ರೀತಿಯಾಗಿ ನಿಡಿ2 ರಲ್ಲಿ ಬರೆಯಲಾಗಿದೆ ಎಂದು ಹೇಳುತ್ತಾರೆ. ಆ ರೀತಿಯಾಗಿ ನಿಡಿ2 ರಲ್ಲಿ ಪಹಣಿಯಲ್ಲಿ 1973-74 ರಿಂದ ಎಂದು ಬರೆಯಲಾಗಿದೆ ಎಂದರೆ ನಿಜ. ನಿಡಿ 2 ರಲ್ಲಿ ನಮೂದಿಸಿರುವ ಬೇರೆ ವ್ಯಕ್ತಿಗಳ ಬಗ್ಗೆ ಮತ್ತು ಅವರ ಹೆಸರಿಗೆ ಎಂ ಆರ್ ಗಳು ಆದ ಬಗ್ಗೆ ನನ್ನದು ತಕರಾರು ಇರುವುದಿಲ್ಲ. ನಿಡಿ 2 ರಲ್ಲಿ ಕ್ರಯ ಎಂದು ನಮೂದು ಇರುತ್ತದೆ ಎಂದರೆ ಗೊತ್ತಿಲ್ಲ. ನಿಡಿ2 ರಲ್ಲಿ ಬೇರೆ ವ್ಯಕ್ತಿಗಳ ಹೆಸರು ಯಾವ ಆಧಾರದ ಮೇರೆಗೆ ಬಂದಿರುತ್ತದೆ ಅವರನ್ನೇ ಕೇಳಬೇಕು ಎಂದು ಹೇಳುತ್ತಾರೆ. ನಿಡಿ2 ರಲ್ಲಿ ಕಲಂ ನಂಬರ್ 9 ಮತ್ತು 10 ರಲ್ಲಿ ಕ್ರಯ ಮತ್ತು ಯಾರ ಹೆಸರಿಗೆ ಕ್ರಯವಾಗಿದೆ ಎಂಬುದು ನಮೂದು ಇದೆ ಎಂದರೆ ನಿಜ. ಬೇರೆಯವರಿಗೆ ಕ್ರಯಮಾಡುವಾಗ ಜಮೀನಿನ ಚಕ್ಕುಬಂದಿ ಮತ್ತು ವಿಸ್ತೀರ್ಣ ಹಾಕಿಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ.

32. ಸರ್ವೆ ನಂ 62/1 ರ ಜಮೀನು ಒಬ್ಬರಿಗೆ ಸೇರಿರುತ್ತದೆಯೋ ಅಥವಾ ಬೇರೆ ಬೇರೆಯವರಿಗೆ ಸೇರಿರುತ್ತದೆಯೋ ಗೊತ್ತಿಲ್ಲ. ತಿಮ್ಮರಾಯಪ್ಪರವರಿಗೆ ಸರ್ವೆ ನಂ 62/1 ರಲ್ಲಿ ಎಷ್ಟು ಜಮೀನು ಬಂದಿತ್ತು ಗೊತ್ತಿಲ್ಲ. ಇದನ್ನು ತಿಳಿದುಕೊಳ್ಳದೇ ಖರೀದಿ ಮಾಡಿದ್ದೀರಾ ಎಂದರೆ ನಾವು ಒಟ್ಟು ಕುಟುಂಬದಲ್ಲಿದ್ದು ನನ್ನ ತಂದೆ ಹೇಳಿದ್ದರಿಂದ ಖರೀದಿ ಮಾಡಿದ್ದೆ ಎಂದು ಹೇಳುತ್ತಾರೆ. ನನ್ನ ಅಜ್ಜಿಯ ಜೊತೆ ಅವರ ಗಂಡು ಮತ್ತು ಹೆಣ್ಣು ಮಕ್ಕಳು ಒಟ್ಟು ಕುಟುಂಬದಲ್ಲಿದ್ದೆವು. ಈಗ ಅವರು ಒಟ್ಟು ಕುಟುಂಬದಲ್ಲಿರುತ್ತಾರಾ

ಎಂದರೆ ನನ್ನ ಅಜ್ಜಿ ಮತ್ತು ಅಜ್ಜ ಜೀವಂತವಿರುವುದಿಲ್ಲ ಆದ ಕಾರಣ ಒಟ್ಟು ಕುಟುಂಬದಲ್ಲಿಲ್ಲ ಎಂದು ಹೇಳುತ್ತಾರೆ. ನಮ್ಮ ಒಟ್ಟು ಕುಟುಂಬ ಯಾವಾಗ ವಿಭಾಗ ಆಗಿರುತ್ತದೆ ಗೊತ್ತಿಲ್ಲ. ನನ್ನ ಅಜ್ಜ ಮತ್ತು ಅಜ್ಜಿ ಯಾವಾಗ ತೀರಿಕೊಂಡಿರುತ್ತಾರೆ ಗೊತ್ತಿಲ್ಲ. ನಮ್ಮಲ್ಲಿ ಈಗ ಒಟ್ಟು ಕುಟುಂಬ ಇರುವುದಿಲ್ಲ ಎಂದರೆ ಗೊತ್ತಿಲ್ಲ.

33. ಸಾಕ್ಷಿಗೆ ಈಗ ದಿನಾಂಕಃ 05-04-2022 ರ ಪ್ರಾದೇಶಿಕ ಭೂ ದಾಖಲೆಗಳ ಜಂಟಿ ನಿರ್ದೇಶಕರ ನ್ಯಾಯಾಲಯ ಆದೇಶದ ದೃಢೀಕೃತ ನಲಕನ್ನು ತೋರಿಸಲಾಗಿ ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಪಿ 37 ಎಂದು ಗುರುತಿಸಲಾಯಿತು. ನಿಪಿ 37 ರ ಮೊಕದ್ದಮೆಯಲ್ಲಿ ನನ್ನ ಪರವಾಗಿ ಟಿ ಪ್ರಕಾಶ್ ವಕೀಲರು ಹಾಜರಾಗಿದ್ದರು. ಒತ್ತುವರಿ ಜಮೀನಿನಲ್ಲಿ ಕಟ್ಟಡ ಕಟ್ಟಬಾರದೆಂದು ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಆಗಿತ್ತು ಎಂದರೆ ನಿಜ, ಸಾಕ್ಷಿ ಮುಂದುವರೆದು ನಾನು ಒತ್ತುವರಿ ಮಾಡಿಲ್ಲ ಎಂದು ಹೇಳುತ್ತಾರೆ. ನಾನು ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿರುತ್ತೇನೆಂದು ನನ್ನ ವಿರುದ್ದ ವಾದಿ ಪ್ರತ್ಯೇಕ ಮೊಕದ್ದಮೆ ನಂ ಮಿಸ್ 19/19 ಹೂಡಿರುತ್ತಾರೆ ಎಂದರೆ ಇರಬಹುದು, ಸಾಕ್ಷಿ ಮುಂದುವರೆದು ನಾನು ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿಲ್ಲ ಎಂದು ಹೇಳುತ್ತಾರೆ. ನಿಪಿ34 ಫೋಟೋಗಳು ಇದಕ್ಕೆ ಸಂಬಂದಿಸಿದ ಫೋಟೋಗಳು ಎಂದರೆ ನಾನು 2016 ರಲ್ಲೇ ಬೋರ್ ವೆಲ್ ಹಾಗೂ ಪಂಪ್ ಹೌಸ್ ನಿರ್ಮಿಸಿದ್ದೆ ಎಂದು ಹೇಳುತ್ತಾರೆ. ಈ ನ್ಯಾಯಾಲಯದ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶದ ವಿರುದ್ದ ನಾನು ಮೇಲ್ಮನವಿ ಸಲ್ಲಿಸಿಲ್ಲ. ನಿಪಿ 37 ರ ಮೊಕದ್ದಮೆಯಲ್ಲಿ ನಾನು ತಕರಾರು ಸಲ್ಲಿಸಿರುವುದಿಲ್ಲ. ಸರ್ವೆ ಮಾಡಿಸಿರುವುದು ಸರಿಯಿರುವುದಿಲ್ಲವೆಂದು ವಾದಿಗಳೇ ಮೊಕದ್ದಮೆ ಹೂಡಿದ್ದು ನಾನು ನನ್ನ ಜಮೀನಿನ ಸ್ವಾಧೀನತೆಯನ್ನು ಹೊಂದಿದ್ದರಿಂದ ತಕರಾರು ಸಲ್ಲಿಸಿರುವುದಿಲ್ಲ. ವಾದಿ ನಮ್ಮ ಜಾಗದಲ್ಲಿ ಸರ್ವೆ ಮಾಡಿಸಿ ಅದು ಸರಿಯಿರುವುದಿಲ್ಲವೆಂದು ಅವರೇ ಮೊಕದ್ದಮೆಯನ್ನು ಹೂಡಿದ್ದರು.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**